ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೆ,ಗೊಂದಿ ಚಾನಲ್ ಬಹಳ ಹಳಯ ಕಾಲದ ಚಾನಲ್ ಆಗಿದ್ದು. ಸಂಪೂರ್ಣವ್ಗಿ ಹೂಳು ತುಂಬಿಕೊಂಡಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದರಲ್ಲಿ ಸತ್ಯಾಂಶ ಇದೆ. ಇದರಿಂದಾಗಿ ಬೇಸಿಗೆ ಕಾಲದಲ್ಲಿ ಒಣ ಭೂಮಿಗೆ ನೀರನ್ನು ಒದಗಿಸುವುದು ಕಷ್ಟ ಎಂಬು ನಮಗೆ ಬಂದರತಕ್ಕ ವರದಿಯಿಂದ ವ್ಯಕ್ತವಾಗುತ್ತದೆ ಆದರೆ ಈ ಕೆಲಸಕಾರ್ಯಕ್ಕಾಗಿ ಕೇಂದ್ರ ಸರ್ಕಾರದ ವತಿಯಿಂದ ಹಣವನ್ನು ಪಡೆಯತಕ್ಕಂಥಾದ್ದಕ್ಕೆ ೨೨೯.೫೫ ಲಕ್ಷ ರೂಪಾಯಿಗಳ ಅಂದಾಜನ್ನು ತಯಾರು ಮಾಡಿ ರಾಷ್ಟ್ರೀಯ ಜಲನಿರ್ವಹಣಾ ಯೋಜನೆಯಡಿಯಲ್ಲಿ ತೆಗೆದುಕೊಳ್ಳುವುದಕ್ಕೆ ಸೇರಿಸಿದ್ದೇವೆ. ಇದರಲ್ಲಿ ಹಿಂದೆ ಮುಂದೆ ನೋಡುವ ಪ್ರಶ್ನೆಯಿಲ್ಲ. ಇದು ಬಹಳ ಅಗತ್ಯವಾಗಿ ಆಗಬೇಕಾಗಿರತಕ್ಕಂಥಾದ್ದು. ಈಗ ಹೂಳು ತುಂಬಿಕೊಂಡಿರುವ ಕಾರಣದಿಂದಾಗಿ ಸುಮಾರು ೨೦ ಸಹಸ್ರ ಎಕರೆ ಪ್ರದೇಶಗಳಿಗೆ ನೀರು ಒದಗಿಸುವುದು ಕಷ್ಟಸಾಧ್ಯವಾಗಿದೆ. ಆದುದರಿಂದ ಈ ಯೋಜನೆಯನ್ನು ಕೇಂದ್ರ ಸರಕಾರದ ಜಲ ನಿರ್ವಹಣಾ ಯೋಜನೆಯಡಿಯಲ್ಲಿ ನೆರವನ್ನು ತೆಗೆದುಕೊಂಡು ಕೆಲಸವನ್ನು ಪೂರ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಮಾನ್ಯ ಸದಸ್ಯರು ಕಂದಾಯ ವಸೂಲಾತಿಯ ವಿಚಾರವಾಗಿ ಹೇಳಿದ್ದಾರೆ. ನೀರು ಕೊಡದೇನೆ ಕೆಲವರಿಂದ ಕಂದಾಯ ವಸೂಲಿ ಮಾಡಿದ್ದಾರೆ ಎಂದು ಹೇಳಿದ್ದಾರೆ. ಈ ಕುರಿತು ಕಂದಾಯ ಹಾಗೂ ನೀರಾವರಿ ಇಂಜಿನಿಯರಿಂಗ್‌ನ ಅಧಿಕಾರಿಗಳು ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡಿ, ಯಾರು ಈ ನೀರನ್ನು ಬಳಸುತ್ತಿದ್ದಾರೆ ಅವರಿಂದ ಮಾತ್ರ ಕಂದಾಯ ವಸೂಲಿ ಮಾಡಬೇಕೆಂಬ ಸ್ಪಷ್ಟ ಆದೇಶ ಈಗಾಗಲೇ ಹೋಗಿದೆ, ಅದ್ದರಿಂದ ನೀರು ಬಳಸಿಕೊಳ್ಳದ ರೈತರಿಗೆ ಇದರಿಂದ ಯಾವುದೇ ತೊಂದರೆಯಾಗುವುದಿಲ್ಲ ಎಂದು ಹೇಳಬಯಸುತ್ತೇನೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ,—ಮಾನ್ಯ ಅಧ್ಯಕ್ಷರೆ, ಗೊಂದಿ ಸಾಲಾದ ಅಚ್ಚುಕಟ್ಟು ಪ್ರದೇಶದಲ್ಲಿನ ರೈತರು ನೀರನ್ನು ಹಾಯಿಸಿಕೊಂಡಿದ್ದಾರೆ. ಆದರೆ ಬೆಳೆ ಬಂದಿಲ್ಲ. ಅರ್ಧಂಬರ್ಧ ನೀರನ್ನು ಹಾಯಿಸಿಕೊಂಡು ಬೆಳೆ ಬಂದಿಲ್ಲದೇ ಇದ್ದರೂ ತಾವು ನೀರಿನ ತೆರಿಗೆ ವಸೂಲಿ ಮಾಡುತ್ತೀರೊ ? ಅಥವಾ ಅದನ್ನು ರದ್ದು ಮಾಡುತ್ತೀರೊ ಎಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಬೆಳೆಯುವುದು ಬಿಡುವುದಂ ರೈತರಿಗೆ ಸೇರಿರತಕ್ಕಂಥಾದ್ದು. ಆದರೆ ನೀರು ಕೊಟ್ಟ ಮೇಲೆ ಕಂದಾಯ ಕೊಡಬೇಕಲ್ಲವೇ ?

ಪ್ರೊ. ಎಂ. ಡಿ. ನಂಜುಂಡಸ್ವಾಮಿ,—ನಾಲೆಯ ದೋಷದಿಂದಾಗಿ ಅವರಿಗೆ ಸರಿಯಾಗಿ ನೀ ರೆ ಬಂದಿಲ್ಲ, ಅದು ಅವರ ತಪ್ಪಲ್ಲವಲ್ಲ ?

ಶ್ರೀ ಕರಿಯಣ್ಣ.—೧೦ ವರ್ಷಗಳಿಂದ ಆ ನಾಲೆಯಿಂದ ನೀರು ಸರಿಯಾಗಿ ಬಾರದೆ ರೈತರ ಬೆಳೆಗೆ ನಷ್ಟವಾಗಿದೆ ಹೀಗೆ ಪರಿಸ್ಥಿತಿ ಇದ್ದರೂ ಕೂಡ ಕಂದಾಯದ ವಸೂಲಾತಿ ಆಗಿದ್ದು, ಅದನ್ನು ವಾಪಸ್ ಕೊಡತಕ್ಕೀರಾ ? ನಿಮ್ಮ ಅಧಿಕಾರಿಗಳೇ ಜಂಟಿಯಾಗಿ ಅದನ್ನು ಪರಿಶೀಲನೆ ಮಾಡಿದಾಗ ವಾಸ್ತವಾಂಶ ತಿಳಿದುಬಂದಿಲ್ಲವೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ನೀರನ್ನು ಎಲ್ಲಿ ಒದಗಿಸಲಾಗಿಲ್ಲ ಅಲ್ಲಿ ವಾಟರ್‌ಟ್ಯಾಕ್ಸ್ ಹಾಕ ಬಾರದೆಂದು ಸರ್ಕಾರದ ನಿರ್ಣಯವಿದೆ. ಆದರೆ ನೀರು ಉಪಯೋಗಿಸಿಕೊಂಡವರಿಗೆ ಹಾಕತ್ತೇವೆ. ಆರ್‌ಟಿಸಿಯಲ್ಲಿ ದಾಖಲಾತಿ ಇಲ್ಲದೆ ಇರತಕ್ಕವರಿಂದ ನಾವು ಕಂದಾಯ ವಸೂಲು ಮಾಡುವುದಕ್ಕೆ ಹೋಗುವುದಿಲ್ಲ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಅಧ್ಯಕ್ಷರೇ, ಸರ್ಕಾರ ಮಾಡಿರುವ ತಪ್ಪಿಗೆ ಅವರೇ ಪರಿಹಾರ ಕೊಡಬೇಕು ನಮಗೆ. ಕೋರ್ಟ್‌ಗೆ ಹೋಗಲು ನಮಗೆ ಶಕ್ತಿಯಿಲ್ಲ, ಆ ಕಾರಣದಿಂದ ತಾವು ಪರಿಹಾರ ಕೊಡಿಸುತ್ತೀರಾ ಎಂದು ತಮ್ಮನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಪರಿಹಾರ ಎಷ್ಟು ಕೊಡಬೇಕಾಗುವುದೆಂದು ಎಸ್ಟಿಮೇಟ್ ಮಾಡಿಸಿ.

ಕಾವೇರಿ ಕೊಳ್ಳದ ಯೋಜನೆಗಳಿಗೆ ೧೯೯೦-೯೧ನೇ ಸಾಲಿನಲ್ಲಿ ನಿಗದಿಯಾದ ಮೊತ್ತ

೬೫೧. ಶ್ರೀ ಸಿ. ಬೈರೇಗೌಡ (ವೇಮಗಲ್) ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಕಾವೇರಿ ಕೊಳದ ಯೋಜನೆಗಳಿಗೆ ೧೯೯೦-೯೧ನೇ ಸಾಲಿನ ಆಯವ್ಯಯದಲ್ಲಿ ನಿಗದಿ ಮಾಡಿದ್ದ ಮೊತ್ತವೆಷ್ಟು ?

ಅ) ಸರ್ಕಾರವು ೧೯೯೦-೯೧ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿರುವ ಮೊತ್ತವಲ್ಲದೆ ೧೫೦ ಕೋಟಿ ಅಧಿಕ ಹಣವನ್ನು ಬಿಡುಗಡೆ ಮಾಡಲು ಉದ್ದೇಶಿಸಿದೆಯೇ?

ಆ) ಹಾಗಿದ್ದಲ್ಲಿ, ಈ ಮುಂಚೆ ಕಾವೇರಿ ಕೊಳ್ಳದ ಯೋಜನೆಗಳಿಗೆ ನಿಗದಿ ಮಾಡಿದ ಮೊತ್ತ ಹಾಗೂ ಹೆಚ್ಚುವರಿ ನಿಗದಿ ಮಾಡಿದ ಮೊತ್ತವೆಷ್ಟು?

ಈ) ಈ ನಿಗದಿತ ಮೊತ್ತ ಹಾಗೂ ಹೆಚ್ಚುವರಿ ನಿಗದಿ ಮಾಡಿದ ಹಣವನ್ನು ೧೯೯೦-೯೧ನೇ ಸಾಲಿನಲ್ಲಿ ಖರ್ಚು ಮಾಡಲು ಸರ್ಕಾರವು ಪೂರ್ವಭಾವಿ ಸಿದ್ಧತೆ ಮಾಡಿದೆಯೇ?

ಶ್ರೀ ಜೆ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೧೧೩.೭೫ ಕೋಟಿ ರೂಪಾಯಿಗಳು.

ಆ) ಹೆಚ್ಚಳ ಅನುದಾನ ಒದಗಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಪರಿಶೀಲನೆ ಪೂರ್ಣವಾದ ನಂತರ ವಿವರಗಳನ್ನು ಒದಗಿಸಲು ಸಾಧ್ಯವಾಗುವುದು.

ಈ) ಈ ದಿಸೆಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಸಿ. ಭೈರೇಗೌಡ.— ಅಧ್ಯಕ್ಷರೇ, ಮೊನ್ನೆ ಸಚಿವರು ಒಂದಕ್ಕಿಂತ ಹೆಚ್ಚು ಬಾರಿ ಪತ್ರಿಕಾ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಈ ಸದನದಲ್ಲಿ ನಾನು ಪ್ರಸ್ತಾಪಿಸಿದಾಗ, ನೀವು ಹೊರಗಡೆ ಹೇಳುವುದರಿಂದ ನಾನೂ ಹೊರಗಡೆ ಹೇಳಿದೆ ಎಂದಿದ್ದಾರೆ. ಆದರೆ ಅವರು ಹೊರಗಡೆ ಹೇಳಿರುವುದಕ್ಕೂ ಇಲ್ಲಿ ಕೊಟ್ಟಿರುವ ಉತ್ತರಕ್ಕೂ ವ್ಯತ್ಯಾಸ ಇದೆ. ಉತ್ತರದಲ್ಲಿ ಪರಿಶೀಲನೆಯಲ್ಲಿದೆ ಎಂದಿದ್ದಾರೆ. ಹ್ಞಾಗಾದರೆ ಹಣ ಕೊಡುತ್ತೀರೋ ಇಲ್ಲವೋ ಹೇಳಿಬಿಡಿ.

ಶ್ರೀ ಜೆ. ಪುಟ್ಟಸ್ವಾಮಿ ಗೌಡ.— ಅವರು ಕೇಳಿದ್ದಕ್ಕೆ ನಾನಂ ಸಮರ್ಪಕ ಉತ್ತರ ಕೊಟ್ಟಿದ್ದೇನೆ. ನಾವು ಆಯವ್ಯಯದಲ್ಲಿ ೧೧೩.೭೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಕಾವೇರಿ ಕೊಳ್ಳದ ಜಲಾಶಯಗಳನ್ನು ಪೂರ್ಣ ಮಾಡಬೇಕಾದರೆ ನಮಗೆ ಇನ್ನೂ ೮೪೫ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆ ಜಲಾನಯನದ ಪೂರ್ಣ ಪ್ರಯೋಜನವನ್ನು ನಾವು ಹೊಂದಬೇಕಾಗಿರುವುದು ಅನಿವಾರ್ಯವಾದ್ದರಿಂದ ಹಣ ಎಷ್ಟಾದರೂ ಕೊಟ್ಟು ಪೂರ್ತಿ ಮಾಡಬೇಕಾಗುತ್ತದೆ. ನಾವು ಯಾವುದೇ ರೀತಿಯಲ್ಲಾದರೂ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಈ ಯೋಜನೆಯನ್ನು ಆದಷ್ಟು ಬೇಗ ಪೂರ್ತಿ ಮಾಡಬೇಕೆಂಬ ಛಲದಲ್ಲಿದ್ದೇವೆ. ಆ ಕೆಲಸವನ್ನು ನಾವು ತೀವ್ರಗತಿಯಲ್ಲಿ ಕೈಗೆತ್ತಿಕೊಂಡಿದ್ದೇವೆ. ನಮ್ಮ ಹಕ್ಕನ್ನೂ ಕೂಡ ಇದರಲ್ಲಿ ಉಳಿಸಿಕೊಳ್ಳತಕ್ಕಂತಹ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ. ಭೈರೇಗೌಡ.— ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ ಮತ್ತೆ ಕೇಳುತ್ತೇನೆ ೧೯೯೦-೯೧ರ ಆಯವ್ಯಯದಲ್ಲಿ ನಿಗದಿಪಡಿಸಿದ ಮೊತ್ತವಲ್ಲದೆ ೧೫೦ ಕೋಟಿ ಅಧಿಕ ಹಣವನ್ನು ಬಿಡುಗಡೆ ಮಾಡುವುದಾಗಿ ಉದ್ದೇಶಿಸಲಾಗಿದೆಯೆ ಎಂದು ಕೇಳಿದ್ದೇನೆ. ಅದು ಸ್ಪಷ್ಟವಾಗಿದೆ ತಾವು ಪತ್ರಿಕೆಯಲ್ಲಿ ನಾವು ಈ ವರ್ಷ ೧೫೦ ಕೋಟಿ ರೂಪಾಯಿ ಹಣವನ್ನು ಹೆಚ್ಚಿಗೆ ಕೊಡುತ್ತೇವೆ ಎಂದು ಒಂದಕ್ಕಿಂತ ಹೆಚ್ಚು ಸಲ ಸ್ಪಷ್ಟವಾಗಿ ಹೇಳಿದ್ದೀರಿ. ನಾನು ಪತ್ರಿಕಾ ಹೇಳಿಕೆಯನ್ನು ತರಲು ಹೋಗಿದ್ದೆ ಅದು ತಕ್ಷಣ ಸಿಗಲಿಲ್ಲ. ತಾವು ಹಾಗೆ ಹೇಳಿರುವುದು ನಿಜವೋ ಅಲ್ಲವೋ ಹೇಳಿ?

ಶ್ರೀ ಜೆ. ಪುಟ್ಟಸ್ವಾಮಿಗೌಡ.— ಅಧ್ಯಕ್ಷರೇ ೧೫೦ ಕೋಟಿ ಏಕೆ ಇನ್ನೂ ಸ್ವಲ್ಪ ಜಾಸ್ತಿ ಕೊಟ್ಟು ಪೂರ್ತಿ ಮಾಡಬೇಕಾಗಿದೆ. ಅದೇ ನನ್ನ ವಾದ. ಅದು ೧೫೦ ಕೋಟಿಗೆ ಸೀಮಿತ ಅಲ್ಲ. ಅದನ್ನು ಪೂರ್ತಿ ಮಾಡಲು ಎಷ್ಟಾದರೂ ಆಗಲಿ. ಕೊಟ್ಟು ಪೂರ್ತಿ ಮಾಡಲೇ ಬೇಕು ಈ ವರ್ಷ ೧೬೦ ಕೋಟಿ ಆಗಬಹುದು ಅಥವಾ ೧೭೦ ಕೋಟಿ ಆದರೂ ಆಗಬಹುದು ಈಗ ನಾವು ಆ ದಿಸೆಯಲ್ಲಿ ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಶ್ರೀ ಸಿ. ಭೈರೇಗೌಡ — ಪರಿಶೀಲನೆ ಮಾಡುತ್ತೇವೆ ಎನ್ನುವುದಕ್ಕೂ ಹಣ ಕೊಡುತ್ತೇವೆ ಎನ್ನುವುದಕ್ಕೂ ವ್ಯತ್ಯಾಸ ಇದೆ. ಪರಿಶೀಲನೆ ಎಂದರೆ ಯಾವ ತರಹ ಬೇಕಾದರೂ ಆಗಬಹುದು ಆದ್ದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ೧೫೦ ಕೋಟಿಗೂ ಹೆಚ್ಚಿಗೆ ಕೊಡುವುದಾದರೆ ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಈ ವರ್ಷ ೧೫೦ ಕೋಟಿ ಕೊಡುತ್ತೇವೆ ಎಂದು ಪತ್ರಿಕಾ ಹೇಳಿಕೆ ಕೊಟ್ಟಿರುವುದು ನಿಜವೇ ಅಥವಾ ನಿಜ ಅಲ್ಲವೇ?

ಶ್ರೀ ಜೆ. ಪುಟ್ಟಸ್ವಾಮಿಗೌಡ.— ನಿಜ, ಅಗತ್ಯವೆನಿಸಿದರೆ ಇನ್ನೂ ಜಾಸ್ತಿ ಕೊಡುತ್ತೇನೆಂದು ಹೇಳಿರುವುದೂ ನಿಜ. ಆದರೂ ಆ ಕೊಳದ ಪೂರ್ಣ ಪ್ರಮಾಣದ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ನಾವು ಕಟಿಬದ್ಧರಿದ್ದೇವೆ.

ಶ್ರೀ ಸಿ.ಬೈರೇಗೌಡ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಈ ವರ್ಷ ಇದಕ್ಕೆ ಹಣವನ್ನು ಹೆಚ್ಚಿಗೆ ಕೊಡುತ್ತೇನೆ ಎಂದು ಹೇಳಿದ್ದಾರೆ. ಅದಕ್ಕಾಗಿ ಆ ಪ್ರದೇಶದ ರೈತರ ಪರವಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ವರುಣಾ ಕೆನಾಲ್‌ಗೂ ಮತ್ತೆ ವಿಶ್ವೇಶ್ವರಯ್ಯ ಕೆನಾಲ್‌ಗೂ ಮಾಡ್ರನೈಜೇಷನ್ ನಡೆಯುತ್ತಿದೆ, ಇದಕ್ಕೆ ಎಷ್ಟೆಷ್ಟು ಹಣವನ್ನು ಹೆಚ್ಚುವರಿಯಾಗಿ ಕೊಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬಯಸುತ್ತೀರಿ ಎಂದು ಹೇಳುವುದಕ್ಕೆ ಸಾಧ್ಯವೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ — ಮಾನ್ಯ ಅಧ್ಯಕ್ಷರೇ, ವಿಶ್ವೇಶ್ವರಯ್ಯ ಕೆನಾಲ್ ಆಧುನೀಕರಣಕ್ಕೆ ನಾವು ಒಂದು ಕೋಟಿ ರೂಪಾಯಿಯನ್ನು ಕೊಟ್ಟಿದ್ದೇವೆ. ಆದರೆ ಇದಕ್ಕೆ ಆಯವ್ಯಯದಲ್ಲಿ ಕೊಟ್ಟಿರುವುದು ಸಾಲದು ಎನ್ನುತಕ್ಕಂಥ ಮನವಿಯನ್ನು ನಾವು ಈಗಾಗಲೇ ವಿತ್ತ ಇಲಾಖೆಗೆ ಮಾಡಿ ಕೊಂಡಿದ್ದೇವೆ. ಕನಿಷ್ಟ ೫೦೦ ಲಕ್ಷ ರೂಪಾಯಿ ಕೊಡುವುದಕ್ಕೆ ಬೇಡಿಕೆಯನ್ನು ಸಲ್ಲಿಸಿದ್ದೇವೆ. ಅವರು ಕೊಡತಕ್ಕಂಥ ಹಂತದಲ್ಲಿದ್ದಾರೆ. ಈ ಸಾರಿ ಅಷ್ಟನ್ನು ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ವರುಣಾ ಕೆನಾಲ್ ಬಗ್ಗೆ ಹೇಳಿದ್ದಾರೆ. ಈ ಸಾರಿ ನಮ್ಮ ಆಯವ್ಯದಲ್ಲಿ ೫೦೦ ಲಕ್ಷ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ ಮತ್ತು ಇದಕ್ಕೆ ಇನ್ನು ಸ್ವಲ್ಪ ಹೆಚ್ಚು ಹಣವನ್ನು ಕೊಟ್ಟು ವಿಶ್ವೇಶ್ವರಯ್ಯ ಕೆನಾಲ್ ಆಧುನೀಕರಣ ಮತ್ತು ವರುಣಾ ಕೆನಾಲ್ ಎರಡರ ಕೆಲಸವನ್ನು ಕೂಡಾ ಏಕಕಾಲದಲ್ಲಿ ಪೂರ್ತಿ ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ತುಮಕೂರಿನ ಗುಬ್ಬಿ ತಾಲ್ಲೂಕಿನ ಇಡಿಗೂರ್ ಗ್ರಾಮಕ್ಕೆ ಬೆಂಗಳೂರಿನಿಂದ ಮತ್ತು ಕುಣಿಗಲ್‌ನಿಂದ ನೇರ ಬಸ್ಸು

೧೦೫೧ ಶ್ರೀ ಜಿ ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಗುಬ್ಬಿ ತಾಲ್ಲೂಕಿನ ಇಡಿಗೂರ್ ಗ್ರಾಮಕ್ಕೆ ಬೆಂಗಳೂರಿನಿಂದ ಹಾಗೂ ಕುಣಿಗಲ್‌ನಿಂದ ನೇರ ಬಸ್ಸುಗಳನ್ನು ಓಡಿಸುತ್ತಿದ್ದದು ನಿಜವೇ ?

(ಆ) ಹಾಲಿ ಅದನ್ನು ನಿಲ್ಲಿಸಿರುವುದು ನಿಜವಲ್ಲವೆ ?

(ಇ) ಹಾಗಿದ್ದಲ್ಲಿ ಈ ಸೌಕರ್ಯವನ್ನು ಪುನಃ ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಕೆ.ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು).—

(ಅ) ಹೌದು.

(ಆ) ಬೆಂಗಳೂರು-ಕುಣಿಗಲ್-ಇಡಿಗೂರು ಮಾರ್ಗದಲ್ಲಿ ಓಡಿಸುತ್ತಿದ್ದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸನ್ನು ನಿಲ್ಲಿಸಲಾಗಿದೆ.

(ಇ) ಸಾರಿಗೆ ಒತ್ತಡ ಹೆಚ್ಚಾದಾಗ,

ಶ್ರೀ ಜಿ. ಎಸ್. ಶಿವನಂಜಪ್ಪ. ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರದಲ್ಲಿ ಇಡಗೂರಿಗೆ ಬಸ್ಸನ್ನು ಓಡಿಸಲಾಗುತ್ತಿತ್ತು, ಈಗ ಇದನ್ನು ನಿಲ್ಲಿಸಿದ್ದೇವೆ ಎಂದು ಕೊಟ್ಟಿದ್ದಾರೆ. ಹಿಂದೆ ೧೯೮೯ರಲ್ಲಿ ಇದೇ ಸದನದ ಮೂಲಕ ಒಂದು ಅರ್ಜಿಯನ್ನು ಕೊಟ್ಟು ಇಲ್ಲಿ ಬಸ್ಸಿನ ಅವಶ್ಯಕತೆ ಇದೆ, ಇದು ಬಹಳ ಇಂಟೀರಿಯರ್ ವಿಲೇಜ್ ಇದೆ. ಗುಬ್ಬಿ ತಾಲ್ಲೂಕಿಗೆ ಬಸ್ ಸೌಕರ್ಯವನ್ನು ಒದಗಿಸ ಬೇಕೂ ಎಂದು ಕೇಳಿದ್ದೆ. ಆಗ ಅಲ್ಲಿಗೆ ಬಸ್‌ನ್ನು ಹಾಕಿದ್ದರು. ಬೆಂಗಳೂರು ಕುಣಿಗಲ್ ಮಾರ್ಗವಾಗಿ ಬರುವ ಬಸ್ ಅಲ್ಲದೇ ತುಮಕೂರು ಮತ್ತೆ ಗುಬ್ಬಿ ಮಾರ್ಗವಾಗಿ ಒಂದು ಬಸ್‌ನ್ನು ಓಡಿಸುತ್ತಿದ್ದರು, ಈ ಎರಡು ಬಸ್‌ಗಳನ್ನು ನಿಲ್ಲಿಸಿಬಿಟ್ಟಿದ್ದಾರೆ, ಯಾವಾಗ ಬಸ್‌ನ್ನು ಓಡಿಸುತ್ತಾರೆ ಎಂದು ಕೇಳಿದ್ದಕ್ಕೆ ಸಾರಿಗೆ ಒತ್ತಡ ಹೆಚ್ಚಾದಾಗ ಎಂದು ಹೇಳಿದ್ದಾರೆ. ಸಾರಿಗೆ ಒತ್ತಡ ಹೆಚ್ಚಾಗಿತ್ತು, ಆದರಿಂದಲೇ ಅಲ್ಲಿಗೆ ಎರಡು ಬಸ್‌ಗಳನ್ನು ಓಡಿಸುತ್ತಿದ್ದರು. ಈ ಮಧ್ಯೆ ಕಂಡಕ್ಟರ್‌ಗಳು ಏನು ಮಾಡುತ್ತಿದ್ದರು ಎಂದರೆ, ಒಂದು ಬಸ್ ಕೂಡಾ ಚೆಕ್ ಮಾಡುವುದನ್ನು ಅಲ್ಲಿ ಬಿಟ್ಟು ಬಿಟ್ಟಿದ್ದಾರೆ ಕುಣಿಗಲ್‌ನಿಂದ ಇಡಗೂರಿಗೆ ಮೂರು ರೂಪಾಯಿ ಛಾರ್ಜ್ ಇದೆ, ಪ್ರಯಾಣಿಕ ೨-೨೦ ಪೈಸೆಯನ್ನು ಕೊಟ್ಟರೆ ಅದನ್ನು ತೆಗೆದುಕೊಂಡು ಟಿಕೆಟ್‌ನ್ನು ಕೊಡುತ್ತಿರಲಿಲ್ಲ. ಇದರ ಬಗ್ಗೆ ನಾನು ಅನೇಕ ಸಾರಿ ಕಂಪ್ಲೇಂಟನ್ನೂ ಕೊಡಾ ಮಾಡಿದ್ದೇನೆ. ಆದರೂ ಕೂಡಾ ಕ್ರಮ ತೆಗೆದುಕೊಂಡಿಲ್ಲ. ಈಗ ಸಾರಿಗೆ ಒತ್ತಡ ಹೆಚ್ಚಾದಾಗ